# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಡಿ–7243/2014/ಡಿ.ಆರ್.ಇ–2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 16/04/2021

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ.ಸಿ.ಎಲ್.ಆನಂದ, ಸಹಾಯಕ ಆಯುಕ್ತರು, ತುಮಕೂರು ಉಪವಿಭಾಗ, ತುಮಕೂರು ಜಿಲ್ಲೆ, 2) ಶ್ರೀ.ಶಂಭುಲಿಂಗಯ್ಯ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಹಾಗೂ 3) ಶ್ರೀ.ನಟರಾಜು, ಉಪ ತಹಶೀಲ್ದಾರ್, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ.ಎಸ್.ಎಂ.ತಮ್ಮಣ್ಣಗೌಡ, ಅಧ್ಯಕ್ಷರು, ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ ಜೀರ್ಣೋದ್ಧಾರದ ಸಮಿತಿ, ಹೊಳಲಗುಂದ ಅಂಚೆ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, 1) ಶ್ರೀ.ಸಿ.ಎಲ್.ಆನಂದ, ಸಹಾಯಕ ಆಯುಕ್ತರು, ತುಮಕೂರು ಉಪವಿಭಾಗ, ತುಮಕೂರು ಜಿಲ್ಲೆ, 2) ಶ್ರೀ.ಶಂಭುಲಿಂಗಯ್ಯ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಹಾಗೂ 3) ಶ್ರೀ.ನಟರಾಜು, ಉಪ ತಹಶೀಲ್ದಾರ್, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಸಲ್ಲಿಸಿ, ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ತನಿಖೆ ಕೈಗೊಳ್ಳಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಅಮೃತೂರು ಹೋಬಳಿ, ಹೊಳಲಗುಂದ ಗ್ರಾಮದಲ್ಲಿ ಸರ್ಕಾರದ ಮುಜರಾಯಿ ಇಲಾಖೆಗೆ ಸೇರಿದ ಶ್ರೀ ಉಮಾ ಮಹೇಶ್ವರಿ

ದೇವಸ್ಥಾನದ ಜೀರ್ಣೋದ್ಧಾರದ ಹೆಸರಿನಲ್ಲಿ ಸದರಿ ದೇವಸ್ಥಾನದ ಹಿಂದಿನ ಜಿರ್ಣೋದ್ಧಾರ ಸಮಿತಿಯ ಸದಸ್ಯರು, ಸಾರ್ವಜನಿಕರು ಹಾಗೂ ಭಕ್ತಾಧಿಗಳಿಂದ ವಂತಿಕೆ ಹಣ 10,89,821/-ರೂ. ಗಳನ್ನು ವಸೂಲಿ ಮಾಡಿ ದುರುಪಯೋಗ ಪಡಿಸಿಕೊಂಡಿದ್ದು, ಈ ಬಗ್ಗೆ 2ನೇ ಎದುರುದಾರರಾದ ಶ್ರೀ.ಶಂಭುಲಿಂಗಯ್ಯ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು ರವರಿಗೆ ಹಣವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಡುವಂತೆ ತುಮಕೂರು ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದರೂ ಸಹಾ, 1 ರಿಂದ 3ನೇ ಎದುರುದಾರರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

3. ಮುಂದುವರೆದು, ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ 2013-14ನೇ ಸಾಲಿನ ಜಾತ್ರೆ ಖರ್ಚಿಗೆ 3ನೇ ಎದುರುದಾರರಾದ ಶ್ರೀ.ನಟರಾಜು, ಉಪ ತಹಶೀಲ್ದಾರ್, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು ರವರು ತಾಲ್ಲೂಕು ಕಚೇರಿಯಿಂದ ರೂ.40,000/-ಗಳ ಹಣ ಪಡೆದು, ಜಾತ್ರೆಗೆ 24,700/- ರೂ.ಗಳು ಖರ್ಚು ಆಗಿದೆ ಎಂದು ಸುಳ್ಳು ಬಿಲ್ಲುಗಳನ್ನು ನೀಡಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಸದರಿ ದೇವಸ್ಥಾನ ಜಿರ್ಣೋದ್ಧಾರ ಮಾಡುವ ಬಗ್ಗೆ ಹಾಗೂ ಅಕ್ರಮ ಎಸಗಿರುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ 11 ಪತ್ರಗಳನ್ನು ಬರೆದಿದ್ದರೂ ಸಹಾ, 1 ರಿಂದ 3ನೇ ಎದುರುದಾರರು ಹಿಂದಿನ ಜಿರ್ಣೋದ್ಧಾರ ಸಮಿತಿಯವರ ಜೊತೆ ಶಾಮೀಲಾಗಿ ಹಣ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡದೆ, ಅಧಿಕಾರ ದುರುಪಯೋಗ ಹಾಗೂ ಕರ್ತವ್ಯಲೋಪವೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆ. ಆದ್ದರಿಂದ, 1 ರಿಂದ 3ನೇ ಎದುರುದಾರರ ವಿರುದ್ಧ ತನಿಖೆ ಮಾಡಿ ಶಿಸ್ತು ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ದೂರಿನ ಜೊತೆಗೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ನಡವಳಿ ದಿನಾಂಕ:31-12-2013, ದಿನಾಂಕ:30-08-2014 ರಂದು ಶ್ರೀ ಉಮಾಮಹೇಶ್ವರಿ ಜೀರ್ಣೋದ್ಧಾರ ಸಮಿತಿಯವರು ನಡೆಸಿದ ತುರ್ತು ಸಭೆ ನಡವಳಿಕೆಗಳು, ಶ್ರೀ ಉಮಾಮಹೇಶ್ವರಿ ಜೀರ್ಣೋದ್ಧಾರ ಸಮಿತಿಯ ಮೀಟಿಂಗ್ ಪುಸ್ತಕದ ಪ್ರತಿ. ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ:02-09-2011, ಜಿಲ್ಲಾಧಿಕಾರಿಗಳು ಹಾಗೂ ಇತರೆ ಕಂದಾಯ ಅಧಿಕಾರಿಗಳ ಪತ್ರ ವ್ಯವಹಾರಗಳು ಹಾಗೂ ಇತರೆ ದಾಖಲೆಗಳ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

5. ದೂರುದಾರರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ, 1 ರಿಂದ 3ನೇ ಎದುರುದಾರರ ಆಕ್ಷೇಪಣೆಗಳನ್ನು ಕೇಳಲಾಗಿ, **1ನೇ ಎದುರುದಾರರು** ತಮ್ಮ ಆಕ್ಷೇಪಣೆಯಲ್ಲಿ, ದೂರುದಾರರು ದೂರಿನಲ್ಲಿ ಹೇಳಿರುವ ಎಲ್ಲಾ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯವರು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಹೇಳಲಾದ ಹಣಕ್ಕೆ ಸಂಬಂಧಿಸಿದಂತೆ ಈಗಾಗಲೇ ವಿವಾದಿತ ಸಮಿತಿಯವರಿಗೆ ಕುಣಿಗಲ್ ತಹಶೀಲ್ದಾರ್‌ರವರು ದಿನಾಂಕ:17/10/2012, 10/09/2012 ಮತ್ತು 31/12/2012ರಂದು ನೋಟೀಸುಗಳನ್ನು ನೀಡಿ ವಿವರಗಳನ್ನು ನೀಡುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ, ಸದರಿ ಸಮಿತಿಯವರು ಸಮಿತಿಯ ಹಣಕಾಸಿನ ವಹಿವಾಟಿನ ಬಗ್ಗೆ ಅಡಿಟ್ ವರದಿಗಳು ಮತ್ತು ಇತರೆ ದಾಖಲೆಗಳನ್ನು ಸಲ್ಲಿಸಿರುವುದಾಗಿ, ಸದರಿ ಅಡಿಟ್ ವರದಿಯಂತೆ ವಂತಿಕೆ ವಸೂಲಾಗಿರುವ ಹಣ ರೂ.8,00,834/- ಗಳಾಗಿರುತ್ತದೆ. ಅದರಲ್ಲಿ ಖರ್ಚಾಗಿರುವ ಹಣ ರೂ.5,78,600/- ಗಳಾಗಿರುತ್ತದೆ. ಮತ್ತು ಕೈಯಲ್ಲಿರುವ ಹಣ ರೂ.6,496/- ಗಳೆಂದು ತಿಳಿಸಿ, ಬ್ಯಾಂಕಿನ ಉಳಿತಾಯ ಖಾತೆಯಲ್ಲಿರುವ ಹಣ 2,24,302/-ರೂ.ಗಳೆಂದು ವಸೂಲಾಗಿದ್ದ ಹಣಕ್ಕೂ ಮತ್ತು ಖರ್ಚಿಗೂ ಆಡಿಟ್ ವರದಿಗೂ ತಾಳೆಯಾಗಿರುತ್ತದೆ. ದಿನಾಂಕ:31-03-2011 ರವರೆಗಿನ ಸಮಿತಿಯ ಹಣಕಾಸಿನ ಎಲ್ಲಾ ರಸೀದಿ ಪುಸ್ತಕಗಳನ್ನು, ಬ್ಯಾಂಕ್ ಪುಸ್ತಕಗಳನ್ನು ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ರವರ ವಶಕ್ಕೆ ನೀಡಲಾಗಿರುತ್ತದೆ. ದಿನಾಂಕ:01-04-2011 ರಿಂದ 21-11-2011 ರವರೆಗಿನ ಮಾಹಿತಿ ತಮ್ಮ ಬಳಿ ಇರುವುದಿಲ್ಲ ಎಂದು ಸಮಿತಿಯವರು ತಿಳಿಸಿರುತ್ತಾರೆ. ದೂರುದಾರರು ಮಾಡಿರುವ ಆಪಾದನೆಗಳಂತೆ ಯಾವುದೇ ಅಧಿಕಾರಿಗಳು ಶಾಮೀಲಾಗಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಹಾಗೂ ಈ ವಿಷಯದಲ್ಲಿ ಅರ್ಜಿದಾರರು ಸಲ್ಲಿಸಿರುವ ದೂರಿನ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆ.

6. ಮುಂದುವರೆದು, ಉಪ ತಹಶೀಲ್ದಾರ್ ರವರು ತಾಲ್ಲೂಕು ಕಚೇರಿಯಿಂದ ಜಾತ್ರೆಯ ವೆಚ್ಚಕ್ಕೆ ಪಡೆಯಲಾಗಿದ್ದ ರೂ.40,000/-ಗಳಲ್ಲಿ ರೂ.24,200/-ಗಳನ್ನು ಮಾತ್ರ ಜಾತ್ರಾ ಮಹೋತ್ಸವಕ್ಕೆ ಖರ್ಚು ಮಾಡಿದ್ದು, ತತ್ಸಂಬಂಧ ವೆಚ್ಚದ ಬಗ್ಗೆ ಓಚರ್‌ಗಳನ್ನು ತಹಶೀಲ್ದಾರ್(2ನೇ ಎದುರುದಾರರು) ರವರಿಗೆ ಸಲ್ಲಿಸಿದ್ದು, ಉಳಿಕೆ ಹಣ ರೂ.15,800/- ಗಳನ್ನು ಸಂಬಂಧಿಸಿದ ದೇವಾಲಯದ ಖಾತೆಗೆ ಜಮಾ ಮಾಡಿರುತ್ತಾರೆ. ದೂರುದಾರರು ದೂರಿನಲ್ಲಿ ಮಾಡಿರುವ ಎಲ್ಲಾ ಆರೋಪಗಳು ಆಧಾರ

ರಹಿತವಾಗಿದ್ದು, ಯಾವುದೇ ಸತ್ಯಾಂಶವಿರುವುದಿಲ್ಲ ಎಂದು ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

7. 2 ಮತ್ತು 3ನೇ ಎದುರುದಾರರುಗಳು ಪ್ರತ್ಯೇಕವಾಗಿ ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ, ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಜಾತ್ರಾ ಮಹೋತ್ಸವದ 2013–14ನೇ ಸಾಲಿನ ಜಾತ್ರೆಯ ಖರ್ಚಿಗಾಗಿ 40,000/–ರೂ.ಗಳನ್ನು ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಡಿಎಸ್(2)/ಸಿಆರ್–357/13–14, ದಿನಾಂಕ: 10/03/2014ರ ಆದೇಶದಂತೆ ದೇವಸ್ಥಾನದ ಫಂಡ್‌ನಿಂದ ಭರಿಸಲು ಅನುಮತಿ ನೀಡಿರುತ್ತಾರೆ. ಅದರಂತೆ, ಜಾತ್ರಾ ಖರ್ಚು ವೆಚ್ಚಗಳ ಬಾಬ್ತು 40,000/–ರೂ.ಗಳ ಚೆಕ್‌ನ್ನು ಉಪ ತಹಶೀಲ್ದಾರ್ ಹಾಗೂ ಆಡಳಿತಾಧಿಕಾರಿಗಳು ದೇವಸ್ಥಾನ ರವರಿಗೆ ದಿನಾಂಕ:26–03–2014 ರಂದು ನೀಡಿರುತ್ತಾರೆ. ಅದರಂತೆ ಉಪ ತಹಶೀಲ್ದಾರ್ ರವರು ಜಾತ್ರಾ ಖರ್ಚು ವೆಚ್ಚಗಳಿಗಾಗಿ 24,200/–ರೂ.ಗಳನ್ನು ಖರ್ಚು ಮಾಡಿದ್ದು, ಉಳಿಕೆ 15,800/–ರೂ.ಗಳನ್ನು ದೇವಸ್ಥಾನದ ಖಾತೆಗೆ ದಿನಾಂಕ: 25/06/2014ರಲ್ಲಿ ಜಮಾ ಮಾಡಿರುತ್ತಾರೆ. 24,200/–ರೂ.ಗಳ ಖರ್ಚು ವೆಚ್ಚದ ಓಚರ್ ಮತ್ತು ಬಿಲ್ಲುಗಳನ್ನು ಕಚೇರಿಗೆ ಸಲ್ಲಿಸಿರುತ್ತಾರೆ. ದಿನಾಂಕ:17–07–2014 ರಂದು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜೀರ್ಣೋದ್ಧಾರ ಸಮಿತಿಯ ಸಭೆಯಲ್ಲಿ ತೀರ್ಮಾನವಾದಂತೆ, ಸಮಿತಿಯನ್ನು ರದ್ದುಪಡಿಸಲು ಕ್ರಮ ಜರುಗಿಸಿದ ಕಾರಣ, ದೂರುದಾರರು ದುರುದ್ದೇಶದಿಂದ ಸುಳ್ಳು ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ದೂರಿನಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ಆದ್ದರಿಂದ, ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

8. 1 ರಿಂದ 3ನೇ ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರದಲ್ಲಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳಲ್ಲಿನ ಎಲ್ಲಾ ಅಂಶಗಳನ್ನು ನಿರಾಕರಿಸಿರುತ್ತಾರೆ. ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯವರು ಭಕ್ತಾದಿಗಳಿಂದ ವಸೂಲು ಮಾಡಿರುವ ವಂತಿಕೆ ಹಣ ರೂ.10,89,821/–ಗಳನ್ನು ಸಂಬಂಧಿಸಿದವರಿಂದ ವಸೂಲು ಮಾಡದೆ ಸಮಿತಿಯವರ ಜೊತೆ ಶಾಮೀಲಾಗಿ ಎದುರುದಾರರು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ. ದಿನಾಂಕ:17–07–2014 ರಂದು ನಡೆದ ಸಭೆಯಲ್ಲಿ ಚರ್ಚೆಯಾದ ವಿಷಯಕ್ಕೆ ಬದಲಾಗಿ ಬೇರೆ ಸುಳ್ಳು ವರದಿಯನ್ನು ತಯಾರು ಮಾಡಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ ಹಾಗೂ ದೇವಸ್ಥಾನದ

ಅಭಿವೃದ್ಧಿಗಳು ಕುಂಟಿತವಾಗಲು, ಎದುರುದಾರರು ಕಾರಣಕರ್ತರಾಗಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

9. ಗೌರವಾನ್ವಿತರ ಆದೇಶದಂತೆ ಸದರಿ ದೂರಿನ ವಿಷಯದ ಕುರಿತು ತನಿಖೆ ಮಾಡಿ ವರದಿ ಸಲ್ಲಿಸಲು ಮುಖ್ಯ ಇಂಜಿನಿಯರ್, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ತಿಳಿಸಲಾಗಿತ್ತು. ಅದರಂತೆ, ಶ್ರೀ.ಟಿ.ಸಿ.ಜಯರಾಮಯ್ಯ, ಲೆಕ್ಕಪರಿಶೋಧನಾಧಿಕಾರಿ-1, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ದಿನಾಂಕ:13-07-2020 ರಂದು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ, ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ ಆಡಳಿತಾಧಿಕಾರಿಗಳು ಹಾಗೂ ಎದುರುದಾರರು ಶಾಮೀಲಾಗಿ ವಸೂಲಾದ ವಂತಿಕೆ ಹಣವನ್ನು ಸರ್ಕಾರಕ್ಕೆ ಜಮಾ ಮಾಡದೇ ಹಣ ದುರುಪಯೋಗ ಮಾಡಿಕೊಂಡು ಅವ್ಯವಹಾರ ಮಾಡಿರುವುದು ಹಾಗೂ ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ 2013-14ನೇ ಸಾಲಿನ ಜಾತ್ರಾ ಮಹೋತ್ಸವದ ಖರ್ಚಿಗಾಗಿ ತಾಲ್ಲೂಕು ಕಛೇರಿಯಿಂದ ರೂ.40,000/- ಗಳನ್ನು ಅಮೃತೂರು ಉಪ ತಹಶೀಲ್ದಾರ್ ಹಾಗೂ ದೇವಸ್ಥಾನದ ಆಡಳಿತಾಧಿಕಾರಿಗಳಾದ ಶ್ರೀ.ನಟರಾಜ್‌ರವರು ಹಣ ಪಡೆದು ಜಾತ್ರಾ ಖರ್ಚಿನ ಬಾಬತ್ತು ರೂ.24,200/- ಗಳ ಸುಳ್ಳಿನ ಬಿಲ್ಲುಗಳನ್ನು ನೀಡಿರುತ್ತಾರೆಂಬ ಆಪಾದನೆಗಳು ಲೆಕ್ಕ ತನಿಖೆಯಿಂದ ಸಾಬೀತಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ತನಿಖಾ ವರದಿಯ ಮೇಲೆ 1 ರಿಂದ 3ನೇ ಎದುರುದಾರರ ಆಕ್ಷೇಪಣೆ ಕೇಳಲಾಗಿರುತ್ತದೆ.

10. 1ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ 2013-14ನೇ ಸಾಲಿನ ಜಾತ್ರೆ ಸಂಬಂಧ 40,000/-ರೂ.ಗಳನ್ನು ಸರ್ಕಾರದಿಂದ ಪಡೆಯಲಾಗಿದ್ದು, ಈ ಪೈಕಿ 24,200/-ರೂ.ಗಳನ್ನು ಖರ್ಚು ಮಾಡಲಾಗಿದ್ದು, ಉಳಿಕೆ 15,800/-ರೂ.ಗಳನ್ನು ದೇವಾಲಯದ ಖಾತೆಗೆ ಜಮಾ ಮಾಡಿರುವುದರಿಂದ, ದೂರುದಾರರು ಆರೋಪಿಸಿರುವಂತೆ ಯಾವುದೇ ರೀತಿಯಲ್ಲಿಯೂ ಹಣ ದುರುಪಯೋಗ ಆಗಿರುವುದಿಲ್ಲ. ಅದೇ ರೀತಿ ಸಾರ್ವಜನಿಕರು ಹಾಗೂ ಭಕ್ತಾದಿಗಳಿಂದ ವಸೂಲು ಮಾಡಲಾಗಿರುವ ವಂತಿಕೆ ಹಣ 10,89,820/-ರೂ.ಗಳ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿಸದೆ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂಬ ಆರೋಪದಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ದೂರುದಾರರು ದೇವಸ್ಥಾನದ ಅಭಿವೃದ್ಧಿ ಕಾರ್ಯ ನಿರ್ವಹಿಸಲು

ವಿಫಲರಾಗಿರುವ ಕಾರಣ, ಗ್ರಾಮಸ್ಥರು/ಭಕ್ತಾದಿಗಳ ಅಭಿಪ್ರಾಯದಂತೆ ದಿನಾಂಕ:17-07-2014 ರಂದು ಸಭೆಯಲ್ಲಿ ಆದ ತೀರ್ಮಾನದಿಂದ ದೂರುದಾರರು ಅಸಮಾಧಾನಗೊಂಡು ಸುಳ್ಳು ಆರೋಪ ಮಾಡಿ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

11. 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ನಾನು ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ಆಗಿ ದಿನಾಂಕ:28-03-2014 ರಿಂದ 08-09-2015 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದೂರಿನಲ್ಲಿ ಆರೋಪಿಸಿರುವ ಎರಡೂ ಘಟನೆಗಳ ಅವಧಿಯಲ್ಲಿ ಅಂದರೆ 1ನೇ ಘಟನೆ ದಿನಾಂಕ:18-04-2010 ರಿಂದ 30-10-2011 ರವರೆಗೆ 2ನೇ ಘಟನೆ ದಿನಾಂಕ:10-03-2014 ರಿಂದ 16-03-2014 ರವರೆಗೆ ತಾನು ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ. ದೂರುದಾರರು ಆರೋಪಿಸಿರುವಂತೆ ಜೀರ್ಣೋದ್ಧಾರ ಸಮಿತಿಯವರು ವಸೂಲು ಮಾಡಿರುವ 10,89,821/-ರೂ.ಗಳ ವಂತಿಕೆ ಹಣವನ್ನು ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಹಿಂದಿನ ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ರವರು ಪತ್ರ ಸಂ:ಡಿವಿಎಸ್ ಸಿಆರ್ 94/2011-12, ದಿನಾಂಕ:01-07-2016ರ ಪತ್ರದಲ್ಲಿ ಹಣ ದುರುಪಯೋಗದ ಪ್ರಕರಣದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ನಿರ್ದೇಶನ ಕೋರಿ ಪತ್ರ ಬರೆದಿರುತ್ತಾರೆ. ಆದರೂ ತನಿಖಾಧಿಕಾರಿಯು ಆರೋಪ ಸಾಭೀತಾಗಿದೆ ಎಂದು ಸಲ್ಲಿಸಿರುವ ವರದಿಯು ದಾಖಲೆಗಳಿಗೆ ವ್ಯತಿರಿಕ್ತವಾಗಿದೆ. ನನ್ನ ನಂತರದ ತಹಶೀಲ್ದಾರ್ ರವರು ದುರುಪಯೋಗವಾಗಿದೆ ಎಂದು ಹೇಳಲಾದ 10,89,821/-ರೂ. ಹಣವನ್ನು ದೇವಸ್ಥಾನದ ಉಳಿತಾಯ ಖಾತೆಗೆ ಜಮಾ ಮಾಡಲು ದಿನಾಂಕ:14-12-2015 ರಂದು 17 ವ್ಯಕ್ತಿಗಳಿಗೆ ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ. 3ನೇ ಎದುರುದಾರರು 24,200/-ರೂ.ಗಳ ಜಾತ್ರೆಯ ವೆಚ್ಚದ ಕುರಿತು ಸುಳ್ಳು ಬಿಲ್ಲುಗಳನ್ನು ನೀಡಿರುತ್ತಾರೆ ಎಂಬ ಅಂಶಕ್ಕೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ಆಡಿಟ್ ಆಗಿರುವುದಿಲ್ಲ. ಆದರೂ ಆಡಿಟ್ ವರದಿಯ ಆಧಾರದ ಮೇಲೆ ಹಣ ದುರುಪಯೋಗದ ಬಗ್ಗೆ ತನಿಖೆ ನಡೆಸಬೇಕಾಗಿರುತ್ತದೆ. ನನ್ನ ಅವಧಿಯಲ್ಲಿ ಕಾನೂನು ರೀತಿ ಕ್ರಮ ವಹಿಸಿದ್ದು, ಯಾವುದೇ ರೀತಿಯ ದುರ್ನಡತೆ ಎಸಗಿರುವುದಿಲ್ಲ. ದೂರಿನಲ್ಲಿ ಆರೋಪಿಸಿರುವ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾಗಿರುವ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

12. 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ಶ್ರೀ ಉಮಾಮಹೇಶ್ವರಿ ದೇವಸ್ಥಾನದ 2013-14ನೇ ಸಾಲಿನ ಜಾತ್ರಾ ಮಹೋತ್ಸವದ ಖರ್ಚು ವೆಚ್ಚಕ್ಕಾಗಿ ತಹಶೀಲ್ದಾರ್, ಕುಣಿಗಲ್ ರವರು 40,000/-ರೂ.ಗಳ ಚೆಕ್‌ನ್ನು ತನಗೆ ದಿನಾಂಕ:26-03-2014 ರಂದು ನೀಡಿರುತ್ತಾರೆ. ಸದರಿ ಚೆಕ್‌ನ್ನು ನಗದುಪಡಿಸಿಕೊಂಡು 40,000/-ರೂ.ಗಳ ಪೈಕಿ 24,200/-ರೂ.ಗಳು ಮಾತ್ರ ಖರ್ಚಾಗಿದ್ದು, ಉಳಿಕೆ 15,800/-ರೂ.ಗಳಲ್ಲಿ ದೇವಸ್ಥಾನದ ಅಗತ್ಯ ಖರ್ಚು ವೆಚ್ಚಗಳಿಗಾಗಿ ಉಪಯೋಗಿಸಲು ಅನುಮತಿ ಕೋರಿ ಡಿವಿಎಸ್ ಸಿಆರ್ 4/2013-14, ದಿನಾಂಕ:25-06-2014ರ ಪತ್ರದಲ್ಲಿ ತಹಶೀಲ್ದಾರ್, ಕುಣಿಗಲ್ ರವರಿಗೆ ಪತ್ರ ಬರೆದಿರುತ್ತೇನೆ. ದಿನಾಂಕ:05-05-2014 ರಿಂದ 21-05-2014 ರವರೆಗೆ ಗಳಿಕೆ ರಜೆಯ ಮೇಲೆ ಇದ್ದ ಕಾರಣ ಸದರಿ ಹಣವನ್ನು ದೇವಸ್ಥಾನದ ಖಾತೆಗೆ ಜಮಾ ಮಾಡಲು ವಿಳಂಬವಾಗಿರುತ್ತದೆ. ಜಾತ್ರೆಯ ಖರ್ಚು ವೆಚ್ಚಗಳ ಬಾಬ್ತು ಓಚರ್‌ಗಳನ್ನು ಸಲ್ಲಿಸಿರುತ್ತೇನೆ. ಇದರಲ್ಲಿ ಯಾವುದೇ ರೀತಿಯ ದುರುಪಯೋಗ ಆಗಿರುವುದಿಲ್ಲ. ದೂರುದಾರರು ವೈಯಕ್ತಿಕ ದ್ವೇಷದ ಕಾರಣ ಸುಳ್ಳು ದೂರನ್ನು ಸಲ್ಲಿಸಿರುವುದರಿಂದ, ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

13. ದೂರಿನ ಅಂಶಗಳು, ಎದುರುದಾರರ ಆಕ್ಷೇಪಣೆ, ದೂರುದಾರರ ಪ್ರತ್ಯುತ್ತರ, ತನಿಖಾ ವರದಿ ಹಾಗೂ ತನಿಖಾ ವರದಿಯ ಮೇಲೆ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳು ಹಾಗೂ ಕಡತದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಲಾಗಿ, ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಅಮೃತೂರು ಹೋಬಳಿ, ಹೊಳಲಗುಂದ ಗ್ರಾಮದ ಸರ್ಕಾರದ ಮುಜರಾಯಿ ಇಲಾಖೆಗೆ ಸೇರಿರುವ ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ ಜೀರ್ಣೋದ್ದಾರದ ಹೆಸರಿನಲ್ಲಿ 2010-11ನೇ ಸಾಲಿನಲ್ಲಿ ಅನಧಿಕೃತವಾಗಿ ಸಮಿತಿ ರಚಿಸಿಕೊಂಡಿರುವ ಶ್ರೀ ಜಿ.ಎಂ. ಮಾಯಣ್ಣ, ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡ ಜೀರ್ಣೋದ್ಧಾರ ಸಮಿತಿಯವರು ದೇವಸ್ಥಾನದ ಜೀರ್ಣೋದ್ಧಾರದ ಹೆಸರಿನಲ್ಲಿ ಸಾರ್ವಜನಿಕರು/ಭಕ್ತಾದಿಗಳಿಂದ ದಿನಾಂಕ:18/04/2010 ರಿಂದ 30/10/2011 ರವರೆಗೆ ರಶೀದಿಗಳ ಮೂಲಕ ವಸೂಲು ಮಾಡಿರುವ ಒಟ್ಟು 10,89,821/- ರೂ.ಗಳನ್ನು ದೇವಸ್ಥಾನದ ಖಾತೆಗೆ ಜಮಾ ಮಾಡಿರುವುದು ಕಂಡುಬಂದಿರುವುದಿಲ್ಲ.

14. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರು ದಿನಾಂಕ: 20/07/2012ರ ಪತ್ರದಲ್ಲಿ ಹೊಳಲುಗುಂದ ಗ್ರಾಮದ ಶ್ರೀ ಉಮಾ ಮಹೇಶ್ವರಿ ದೇವಸ್ಥಾನದ ಜೀರ್ಣೋದ್ಧಾರದ ಸಮಿತಿಯನ್ನು ಪೂರ್ವಾನುಮತಿ

ಪಡೆಯದೆ ರಚಿಸಿಕೊಂಡು ಸಾರ್ವಜನಿಕರು/ಭಕ್ತಾಧಿಗಳಿಂದ ಹಣ ವಸೂಲಿ ಮಾಡಿರುವುದರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಕಲಂ 69(ಬಿ) ರನ್ವಯ ಶ್ರೀ ಜಿ.ಎಂ. ಮಾಯಣ್ಣ ರವರಿಗೆ ನೋಟೀಸು ಜಾರಿ ಮಾಡಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿರುವುದು ಕಂಡುಬರುತ್ತದೆ. ಆದರೂ ತಹಶೀಲ್ದಾರ್, ಕುಣಿಗಲ್ ರವರು ಈ ಸಂಬಂಧ ನಿಯಮಾನುಸಾರ ತನಿಖೆ ನಡೆಸಲು ಕ್ರಮಕೈಗೊಂಡಿರುವುದು ಕಂಡುಬರುವುದಿಲ್ಲ.

15. ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಜೀರ್ಣೋದ್ದಾರ ಸಮಿತಿಯವರು ಅನಧಿಕೃತವಾಗಿ ವಸೂಲು ಮಾಡಿರುವ ಒಟ್ಟು ಹಣ ರೂ.10,89,821/-ಗಳ ಬಗ್ಗೆ ಸಹಾಯಕ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರ ಗಮನಕ್ಕೆ ಬಂದಿದ್ದರೂ ಸದರಿಯವರು ಈ ಹಣ ವಸೂಲಿ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದು ಕಂಡುಬರುವುದಿಲ್ಲ ಹಾಗೂ ಜೀರ್ಣೋದ್ಧಾರ ಸಮಿತಿಯವರು ಅನಧಿಕೃತವಾಗಿ ಲೆಕ್ಕಪರಿಶೋಧನೆ ಮಾಡಿಸಿ ವಸೂಲಾತಿ ಮತ್ತು ಖರ್ಚಿಗೂ ತಾಳೆಯಾಗಿರುತ್ತದೆಂದು ತಿಳಿಸಿ ನೀಡಿರುವ ವರದಿಯು ನಿಯಮಾನುಸಾರವಿಲ್ಲದಿದ್ದರೂ ಸಹಾ, ಲೆಕ್ಕಪರಿಶೋಧನಾ ವರದಿಯ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

16. ಕರ್ನಾಟಕ ಆರ್ಥಿಕ ಸಂಹಿತೆ 1958ರ ಸಂಪುಟ 1ರ ಅನುಚ್ಛೇದ 383ರಲ್ಲಿ ಈ ರೀತಿ ತಿಳಿಸಲಾಗಿರುತ್ತದೆ.

> ***"ಯಾವುದೇ ವ್ಯಕ್ತಿಯು ಮಾಡಿದ ವಂಚನೆ ಅಥವಾ ಇತರೆ ಯಾವುದೇ ದಂಡಾಪರಾಧ ಅಥವಾ ಯಾವನೊಬ್ಬ ಸರ್ಕಾರಿ ನೌಕರನು ಮಾಡಿದ ಪ್ರಮಾದ ಮುಂತಾದುವುಗಳ ಮೂಲಕ ಸರ್ಕಾರಕ್ಕೆ ನಷ್ಟ ಸಂಭವಿಸಿತೆಂದು ಸಂಶಯ ಪಡುವುದಕ್ಕೆ ಕಾರಣವಿರುವಾಗಲೆಲ್ಲಾ ಕಛೇರಿಯ ಮುಖ್ಯಾಧಿಕಾರಿಗಳು ಅಥವಾ ಸಕ್ಷಮ ಆಡಳಿತಾಧಿಯವರು ವಿಳಂಬ ಮಾಡದೇ ವಿಷಯವನ್ನು ಪೂರ್ಣ ತನಿಖೆ ಮಾಡತಕ್ಕದ್ದು ಎಂಬುದಾಗಿ ನಿಯಮವಿರುತ್ತದೆ."***

ಈ ಮೇಲ್ಕಂಡ ನಿಯಮದಂತೆ 1 ಮತ್ತು 2ನೇ ಎದುರುದಾರರು ಕ್ರಮ ಜರುಗಿಸದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

17. ದೂರುದಾರರು ಮಾಡಿರುವ 2ನೇ ಆಪಾದನೆಯಾದ ಶ್ರೀ ಉಮಾಮಹೇಶ್ವರಿ ದೇವಸ್ಥಾನದ 2013-14ನೇ ಸಾಲಿನ ಜಾತ್ರಾ ಮಹೋತ್ಸವದ ಖರ್ಚಿಗಾಗಿ ತಾಲ್ಲೂಕು ಕಛೇರಿಯಿಂದ ರೂ.40,000/- ಗಳನ್ನು ಅಮೃತೂರು ಉಪ ತಹಶೀಲ್ದಾರ್ ಹಾಗೂ ದೇವಸ್ಥಾನದ ಆಡಳಿತಾಧಿಕಾರಿಗಳಾದ ಶ್ರೀ ನಟರಾಜ್‌ರವರು (3ನೇ ಎದುರುದಾರರು) ಹಣ ಪಡೆದು ಜಾತ್ರಾ ಖರ್ಚಿನ ಬಾಬ್ತು ರೂ.24,200/- ಗಳ ಸುಳ್ಳಿನ ಬಿಲ್ಲುಗಳನ್ನು ನೀಡಿರುತ್ತಾರೆಂದು ಆಪಾದನೆ ಸಂಬಂಧಿಸಿದಂತೆ ವಿವಾದಿತ ಮೊತ್ತವಾದ ರೂ.40,000/- ಗಳನ್ನು ದಿನಾಂಕ:26-03-2014 ರಂದು ತಹಶೀಲ್ದಾರ್, ಕುಣಿಗಲ್ ರವರು ಬಿಡುಗಡೆ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಮೊತ್ತವನ್ನು 3ನೇ ಎದುರುದಾರರು ಜಾತ್ರಾ ಮಹೋತ್ಸವದ ಖರ್ಚು/ವೆಚ್ಚಗಳನ್ನು ಭರಿಸಲು ಹಣವನ್ನು ಡ್ರಾ ಮಾಡಿರುವುದು ಕಂಡುಬರುತ್ತದೆ. ಶ್ರೀ ಉಮಾಮೇಶ್ವರಿ ಜಾತ್ರಾ ಮಹೋತ್ಸವವು ದಿನಾಂಕ: 10/03/2014 ರಿಂದ 16/03/2014ರವರೆಗೆ ನಡೆದಿರುವುದಾಗಿ ತಿಳಿಸಿದ್ದು, ಈ ಅವಧಿಯಲ್ಲಿ ಖರ್ಚು/ವೆಚ್ಚಗಳ ಸಂಬಂಧವಾಗಿ ರೂ.24,200/- ಗಳನ್ನು ಈ ಕೆಳಕಂಡಂತೆ ಖರ್ಚು ಮಾಡಿದ್ದು ಇರುತ್ತದೆ.

1) ವಿದ್ಯುತ್ ಉಪಕರಣಗಳ ರಿಪೇರಿ
2) ಸಿ.ಎಫ್.ಎಲ್. ಲೈಟುಗಳು
3) ದೇವಸ್ಥಾನದ ರಶೀದಿ ಪುಸ್ತಕ ಮತ್ತು ಇತರೆ ಖರ್ಚುಗಳು
4) ದೇವಸ್ಥಾನದ ಬೋರ್‌ವೆಲ್ ರಿಪೇರಿ
5) ಹೊಸದಾಗಿ ಬೋರ್ಡ್ ಬರೆಸಿರುವುದು
6) ಡಸ್ಟ್‌ಬಿನ್ ಖರೀದಿ

ಈ ಮೇಲ್ಕಾಣಿಸಿದ ವಿವರಗಳಲ್ಲಿನ ವೆಚ್ಚಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.24,200/- ಗಳು ವೆಚ್ಚವಾಗಿರುವ ಬಗ್ಗೆ ಈ ಕಛೇರಿಗೆ ಸಲ್ಲಿಸಿರುವ ತಮ್ಮ ಆಕ್ಷೇಪಣಾ ವರದಿ ದಿನಾಂಕ: 10/11/2014ರಂತೆ ಸದರಿ ವೆಚ್ಚವಾಗಿರುವ ಹಣವನ್ನು ನಗದು ರೂಪದಲ್ಲಿ ನೀಡಿರುವುದಾಗಿ 3ನೇ ಎದುರುದಾರರು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. **ಆದರೆ, ಕರ್ನಾಟಕ ಆರ್ಥಿಕ ಸಂಹಿತೆ 1958ರ ಸಂಪುಟ-1ರ ಅನುಚ್ಛೇದ 72(ಎ)ರಲ್ಲಿ ಓದಿ ನೋಡಲಾಗಿ, ರಾಜ್ಯ ಸರ್ಕಾರಕ್ಕೆ ಅವರು ಸಲ್ಲಿಸಿದ ಸೇವೆಗಳ ಬಗ್ಗೆ ಅಥವಾ ಮಾಡಿದ ಸರಬರಾಜುಗಳ ಬಗ್ಗೆ ಒಬ್ಬ ವ್ಯಕ್ತಿ, ವ್ಯಾಪಾರಸ್ಥ ಸಂಸ್ಥೆ, ಕಂಪನಿ, ಇತ್ಯಾದಿಗಳ ಪ್ರತಿಯೊಂದು ಸಂದರ್ಭದಲ್ಲಿ ರೂ.1,000/- ಗಳನ್ನು ಮೀರಿದ ಮೊಬಲಗುವಿನ ಬಗ್ಗೆ ಬ್ಯಾಂಕ್‌ಗಳ ಎಲ್ಲಾ**

**ಚೆಕ್ಕು/ಡ್ರಾಫ್ಟ್‌ಗಳನ್ನು ತಪ್ಪದೇ ಕ್ರಾಸ್ ಮಾಡಿ ವಿತರಿಸಬೇಕೆಂಬ ಆದೇಶವಿರುತ್ತದೆ.** ಆದರೆ, ಸದರಿ ಪ್ರಕರಣದಲ್ಲಿ ಜಾತ್ರೆಯ ವೆಚ್ಚಗಳ ಖರ್ಚನ್ನು ನಗದು ರೂಪದಲ್ಲಿ ನೀಡಿರುವುದು ನಿಯಮಬಾಹಿರ ಮತ್ತು ಕರ್ತವ್ಯಲೋಪವಾಗಿರುವುದು ಕಂಡುಬರುತ್ತದೆ. ಅಲ್ಲದೆ, ಜಾತ್ರಾ ಮಹೋತ್ಸವವು ಉಪ ತಹಶೀಲ್ದಾರ್‌ರವರು ತಿಳಿಸಿರುವಂತೆ ದಿನಾಂಕ: 10/03/2014 ರಿಂದ 16/03/2014ರವರೆಗೆ ನಡೆದಿದ್ದು, ಈ ಅವಧಿಯಲ್ಲಿನ ವೆಚ್ಚಗಳಿಗಾಗಿ ರೂ.24,200/- ಗಳು ಖರ್ಚಾಗಿರುವುದಾಗಿ ತಿಳಿಸಿದ್ದು, ಉಳಿಕೆ ಮೊತ್ತ ರೂ.15,800/- ಗಳನ್ನು ದಿನಾಂಕ: 25/06/2014ರಲ್ಲಿ ಬ್ಯಾಂಕ್ ಖಾತೆಗೆ ಜಮಾ ಮಾಡಿರುವುದು ಕಂಡುಬಂದಿರುತ್ತದೆ. ಉಪ ತಹಶೀಲ್ದಾರ್ ರವರು ತಮ್ಮ ಬಳಿ ಉಳಿಕೆ ಇರುವ ಹಣವನ್ನು ಜಾತ್ರೆ ಮುಗಿದ ನಂತರ ಸುಮಾರು ಮೂರು ತಿಂಗಳು ಮೇಲ್ಪಟ್ಟು ತನ್ನ ಬಳಿಯೇ ಉಳಿಸಿಕೊಂಡಿದ್ದು, ತದನಂತರ ದಿನಾಂಕ: 25/06/2014ರಲ್ಲಿ ಜಮಾ ಮಾಡಿರುವುದು ತಾತ್ಕಾಲಿಕವಾಗಿ ಹಣ ದುರುಪಯೋಗವಾಗಿರುತ್ತದೆ.

18. ಕರ್ನಾಟಕ ಆರ್ಥಿಕ ಸಂಹಿತೆ ಸಂಪುಟ-1ರಲ್ಲಿನ ಅನುಚ್ಛೇದ 4(ಎ)ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

> ***"ಸರ್ಕಾರಿ ನೌಕರನು ತನ್ನ ಸರ್ಕಾರಿ ಸ್ವರೂಪದಲ್ಲಿ ಭಾಗಿಯಾಗಿರುವ ಎಲ್ಲಾ ಹಣಕಾಸಿನ ವಹಿವಾಟುಗಳನ್ನು ಯಾವುದನ್ನೂ ಬಿಡದೇ ಲೆಕ್ಕಕ್ಕೆ ತರಬೇಕು ಮತ್ತು ಸ್ವೀಕರಿಸಿದ ಎಲ್ಲಾ ಹಣವನ್ನು ಯಾವ ಸಂದರ್ಭದಲ್ಲಿಯೂ ಅನಾವಶ್ಯಕ ವಿಳಂಬವಿಲ್ಲದೆ ಎರಡು ದಿನಗಳೊಳಗಾಗಿ ಸಮುಚಿತ ಲೆಕ್ಕಕ್ಕೆ ಜಮೆ ಮಾಡುವುದಕ್ಕಾಗಿ ಮತ್ತು ಖಜಾನೆಯು ಸಾಮಾನ್ಯ ಶಿಲ್ಕಿನ ಭಾಗವಾಗುವದಕ್ಕಾಗಿ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕದ್ದು ಎಂಬುದಾಗಿರುತ್ತದೆ."***

ಆದಾಗ್ಯೂ ಈ ರೀತಿ 3ನೇ ಎದುರುದಾರರು ತಡವಾಗಿ ಹಣ ಖಾತೆಗೆ ಜಮಾ ಮಾಡುವ ಮೂಲಕ ಸರ್ಕಾರದ ನಿಯಮಗಳನ್ನು ಪಾಲನೆ ಮಾಡದೆ ಕರ್ತವ್ಯಲೋಪ ಎಸಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

19. ತನಿಖಾಧಿಕಾರಿಯು ಸಲ್ಲಿಸಿರುವ ವರದಿಯನ್ನು ತಿರಸ್ಕರಿಸಲು ಹಾಗೂ ತಳ್ಳಿಹಾಕಲು 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ನಂಬಲು ಅರ್ಹವಾದ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ ಹಾಗೂ ಯಾವುದೇ ಪೂರಕ ದಾಖಲೆಗಳು/ಆಧಾರಗಳನ್ನು ಹಾಜರುಪಡಿಸಿರುವುದಿಲ್ಲ. 2ನೇ

ಎದುರುದಾರರು ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ಆಗಿ ದಿನಾಂಕ:28-03-2014 ರಿಂದ 08-09-2015 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದೂರಿನಲ್ಲಿ ಆರೋಪಿಸಿರುವ ಎರಡೂ ಘಟನೆಗಳು ತನ್ನ ಅವಧಿಯಲ್ಲಿ ಸಂಭವಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ, ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ರವರು ದಿನಾಂಕ:26-03-2014 ರಂದು 40,000/-ರೂ.ಗಳ ಚೆಕ್‌ನ್ನು ನೀಡಿರುವುದು ಕಂಡುಬರುತ್ತದೆ. ತದ ನಂತರ 3ನೇ ಎದುರುದಾರರು 40,000/-ರೂ.ಗಳನ್ನು ನಗದೀಕರಿಸಿ ಜಾತ್ರಾ ಮಹೋತ್ಸವಕ್ಕೆ ಖರ್ಚು ಮಾಡಿರುವ 24,200/-ರೂ.ಗಳ ಓಚರ್‌ಗಳು ಮತ್ತು ಬಿಲ್ಲುಗಳ ಕುರಿತು ಹಾಗೂ 3 ತಿಂಗಳ ನಂತರ ಜಮಾ ಮಾಡಿರುವ ಉಳಿಕೆ 15,800/-ರೂ. ಕುರಿತ ವಿದ್ಯಮಾನಗಳು 2ನೇ ಎದುರುದಾರರ ಅವಧಿಯಲ್ಲಿ ನಡೆದಿರುತ್ತದೆ ಹಾಗೂ ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಜೀರ್ಣೋದ್ದಾರಕ್ಕಾಗಿ ಅನಧಿಕೃತವಾಗಿ ವಸೂಲು ಮಾಡಿರುವ ವಂತಿಕೆ ಹಣ ರೂ.10,89,201/-ಗಳನ್ನು ಸರ್ಕಾರದ ಖಾತೆಗೆ ಜಮಾ ಮಾಡುವ ಕುರಿತು 1 ರಿಂದ 3ನೇ ಎದುರುದಾರರು ತಮ್ಮ ಅವಧಿಯಲ್ಲಿ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ, 1 ರಿಂದ 3ನೇ ಎದುರುದಾರರು ಕರ್ತವ್ಯಲೋಪ ಎಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

20. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1 ರಿಂದ 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ, 1ನೇ ಎದುರುದಾರರಾದ **ಶ್ರೀ.ಸಿ.ಎಲ್.ಆನಂದ, ಸಹಾಯಕ ಆಯುಕ್ತರು, ತುಮಕೂರು ಉಪವಿಭಾಗ, ತುಮಕೂರು ಜಿಲ್ಲೆ (ನಿವೃತ್ತಿ ದಿನಾಂಕ:31-07-2034),** 2ನೇ ಎದುರುದಾರರಾದ **ಶ್ರೀ.ಶಂಭುಲಿಂಗಯ್ಯ, ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ನಿವೃತ್ತಿ ದಿನಾಂಕ:30-04-2023)** ಹಾಗೂ 3ನೇ ಎದುರುದಾರರಾದ **ಶ್ರೀ.ನಟರಾಜು, ಉಪ ತಹಶೀಲ್ದಾರ್, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ನಿವೃತ್ತಿ ದಿನಾಂಕ: 30-09-2030)** ರವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ

ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

21. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19/4

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ್]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**